## ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ಶ್ರೀ ರಾಜಶೇಖರ್ ತಂದೆ ಬಸವಣ್ಣೆಪ್ಪ ನೆಲೋಗಿ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಕೆಲ್ಲೂರ ಗ್ರಾಮ ಪಂಚಾಯತಿ, ಜೇವರ್ಗಿ ತಾಲ್ಲೂಕು, ಕಲಬುರಗಿ ಜಿಲ್ಲೆ, ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 14ಎ ಅಡಿಯಲ್ಲಿ ಮಾನ್ಯ ಉಪಲೋಕಯುಕ್ತರಿಗೆ ವಹಿಸುವ ಬಗ್ಗೆ – ಆದೇಶ.

**ಓದಲಾಗಿದೆ:**

ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಅಸಪ ಸಂಖ್ಯೆ: **ಕಂಪ್ಲೇಂಟ್/ಉಪಲೋಕ್/ಜಿಎಲ್‌ಬಿ-5687/2013/ಡಿಆರ್‌ಇ-3 ದಿನಾಂಕ:21-04-2017.**

**ಪ್ರಸ್ತಾವನೆ:**

ಮೇಲೆ ಓದಲಾದ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ನಿಬಂಧಕರು ಕರ್ನಾಟಕ ಲೋಕಾಯುಕ್ತ ಇವರ ಪತ್ರದ ಸಂಗಡ ಲಗತ್ತಿಸಿರುವ ಮಾನ್ಯ ಉಪಲೋಕಾಯುಕ್ತರು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಸೆಕ್ಷನ್ 12(3) ರ ಅಡಿಯಲ್ಲಿ ಸಲ್ಲಿಸಿರುವ ದಿನಾಂಕ: 15.04.2017 ರ ವರದಿಯಲ್ಲಿ ಈ ಕೆಳಗಿನಂತೆ ತಿಳಿಸಿರುತ್ತಾರೆ.

1) An investigation was taken up under Section 9 of the Karnataka Lokayukta Act, on the basis of complaint filed by Shri. Siddalingaswamiji. K., Shri. Karuneshwar Math, Andola, Jewargi Taluk, Kalaburagi District ( hereinafter referred to as 'complainant' for short) against (1) Shri. Rajashekar S/o Basavanneppa Nelogi, Panchayath Development Officer, Kellor Grama Panchayath, Jewargi Taluk, Kalaburagi District, (2) Smt. Chandamma Bheemaraya Tanikedkar, the then President of Grama Panchayath, Kellor, Jewargi Taluk, Kalaburgi District (hereinafter referred to as 'respondents 1 to 3 respectively' for short).

2) The complainant has alleged that the Respondents have misappropriated funds in the matter of execution of work relating to providing irrigation facilities to farmers under SC/ST scheme in the year 2011 upto 2013.

3) The matter was referred for investigation to Deputy Superintendent of Police, Karnataka Lokayukta, Kalaburgi. The Deputy Superintendent of Police has submitted report dated 1/07/2014 as follows:-

ಈ ವಿಷಯವಾಗಿ ನಾನು ವಿಚಾರಣೆ ಕೈಗೊಂಡಂತೆ ಅನುಬಂಧ -2 ರಲ್ಲಿ ಸಂಗ್ರಹಿಸಿದ ದಿನಂಕ:24.04.2014 ರಂತೆ ಅವರ ಪತ್ರ ( ಕಂಡಿಕೆ-3 ಅ.ಬ ಮತ್ತು ಕಂಡಿಕೆ-8 ರೊಂದಿಗೆ ಓದುವುದು) ಸನ್ 2011-12 ನೇ ಸಾಲಿನಲ್ಲಿ

| | | |
|---|---|---|
| 1. | ತಿಪ್ಪವ್ವ ಗಂಡ ಸಂಗಪ್ಪ ಸಾ: ಕೆಲ್ಲೂರ ಜಮೀನು ಸರ್ವೆ ನಂ.83/11 ನೇದ್ದರಲ್ಲಿ ಬಾವಿ ಕಾಮಗಾರಿಗಾಗಿ | ರೂ.91,000.00 |
| 2. | ಧಮ್ಮಣ್ಣ ತಂದೆ ನಿಂಗಣ್ಣ ಸಾ: ಔರಾದ ಜಮೀನು ಸರ್ವೆ ನಣ 13/ಅ ನೇದ್ದರಲ್ಲಿ ಬಾವಿ ಹೂಳೆತ್ತುವ ಕೆಲಸಕ್ಕಾಗಿ | ರೂ.81,241.00 |
| 3. | ಗುರಪ್ಪ ತಂದೆ ಬಾಲಪ್ಪ ಸಾ: ಶಕಾಪುರ ಜಮೀನು ಸರ್ವೆ ನಂ.14 ನೇದ್ದರಲ್ಲಿ ಬಾವಿ ಕೆಲಸಕ್ಕಾಗಿ | ರೂ.57,575.00 |
| 4. | ಶ್ರೀಮತಿ ಗೌರಮ್ಮ ಗಂಡ ಯಲ್ಲಪ್ಪ ಸಾ:ಹಲಗಡ್ಗ, ಸರ್ವೆ ನಂ 131ನೇದ್ದರಲ್ಲಿ ಬಾವಿ ಹೂಳೆತ್ತುವ ಕೆಲಸಕ್ಕಾಗಿ | ರೂ.99,940.00 |
| 5. | ಅರ್ಜುನಪ್ಪ ತಂದೆ ರಂಗಪ್ಪ ಸಾ:ಕೆಲ್ಲೂರ ಜಮೀನು ಸರ್ವೆ ನಂ.40 ನೇದ್ದರಲ್ಲಿ ಬಾವಿ ರಿಪೇರಿ ಕೆಲಸಕ್ಕಾಗಿ | ರೂ.59,960.00 |
| | ಹಾಗೂ 2012-13 ನೇ ಸಾಲಿನಲ್ಲಿ | |

| | | |
|---|---|---|
| 1. | ಶ್ರೀಮತಿ ಲಕ್ಷ್ಮೀಬಾಯಿ ಗಂಡ ಬಸನ್ನ ಸಾ:ಹಾಲಗಡ್ಗ, ಸರ್ವೇ ನಂ.11 ರಲ್ಲಿ ಹೊಸ ಬಾವಿ ತೋಡುವ ಕಾಮಗಾರಿಗಾಗಿ | ರೂ.1,97,945.00 |
| 2. | ಶ್ರೀ ಚಂದ್ರಕಾಂತ ತಂದೆ ಬಸಪ್ಪ ಸಾಳ ಕೆಲ್ಲೂರ ಸರ್ವೇ ನಂ.83 ರಲ್ಲಿ ಪೈಪ್ ಲೈನ್ ಅಳವಡಿಕೆಗಾಗಿ | ರೂ.98,991.00 |
| 3. | ಭೀಮರಾಯ ತಂದೆ ಚಂದಪ್ಪ ಸಾ: ಶಕಾಪುರ ಸರ್ವೇ ನಂ.12 ರಲ್ಲಿ ಪೈಪ್ ಲೈನ್ ಅಳವಡಿಕೆಗಾಗಿ | ರೂ.98,681.00 |
| 4. | ಶ್ರೀಮತಿ ಅನಿತಾ ಗಂಡ ಸಾಯಿಬಣ್ಣ ಸಾ:ಔರಾದ ಸರ್ವೇ ನಂ.205 ರಲ್ಲಿ ಪೈಪ್ ಲೈನ್ ಅಳವಡಿಕೆಗಾಗಿ | ರೂ.98,681.00 |
| 5. | ಶ್ರೀಮತಿ ಸಿದ್ದಮ್ಮ ನ್ಯಾವನೂರ ಸಾ:ಕೆಲ್ಲೂರ ಸರ್ವೇ ನಂ.91/2 ರಲ್ಲಿ ಪೈಪ್ ಲೈನ್ ಅಳವಡಿಕೆಗಾಗಿ | ರೂ.98,991.00 |

ಈ ಪ್ರಕಾರವಾಗಿ 2011-12 ಒಟ್ಟು 5 ಜನ ಹಾಗೂ 2012-13 ರಲ್ಲಿ 5 ಜನ ಎಸ್‌ಸಿ/ಎಸ್‌ಟಿ ರೈತ ಫಲಾನುಭವಿಗಳ ಜಮೀನುಗಳಿಗೆ ನೀರಾವರಿ ಸೌಲಭ್ಯ ಕಲ್ಪಿಸಿದ್ದು ಇರುತ್ತದೆ.

4) The report of the Deputy Superintendent of Police is vague. He has not verified the documents to ascertain whether the aforesaid amount against each beneficiary was spent for the purpose of providing irrigation facilities.

5) The Respondents 1 & 2 have not offered comments. The Respondent 3 is reported to be dead. The Respondent should have submitted records to show that there was no misappropriation of funds.

6) On 19/2/2014, the ombudsmen, Zilla Panchayath, Kalburgi has passed order stating that the Panchayath Development Officer, Grama Panchayath Andola has taken up construction of certain check dams during the years 2009-10, 2011-12 and 2012-13. The check dam which has not been constructed at Sy. No. 442 of Andola Village has not been constructed, instead the check dam was constructed in Sy.No.503 of Andola Village, without permission. The cost towards the construction of check dam of Rs.99,984/- was ordered to be recovered from the

officials responsible. Further, the Ombudsman has ordered to recover a sum of Rs.84,984/- from the Assistant Agricultural Officer; Rs.10,000/- from Panchayath Development Officer and a sum Rs.5,000/- from the President of the Panchayath.

7) In view of the above, there is sufficient material to indict Respondents 1 and 2 for the above said misconduct. Hence, the respondents 1 and 2 have failed to maintain absolute integrity, devotion to duty and have acted in manner which is unbecoming of a Government Servant for which they have made themselves liable for departmental action.

8) Accordingly, now, acting under 12(3) of the Karnataka Lokayukta Act, 1984 recommendation is made to the competent Authority to initiate disciplinary proceedings against the respondent no.1 ) Shri. Rajashekar S/o Basavanneppa Nelogi, Panchayath Development Officer, Kellor Grama Panchayath, Jewargi Taluk, Kalaburagi District, (Presently working at Sonna Grama Panchayath, Jewargi Taluk,) and entrust the inquiry to this Authority under Rule 14-A of the Karnataka Civil Services( Classification, Control and Appeal) Rules, 1957.

9) The respondent no.2 ) Smt. Chandamma Bheemaraya Tanikedkar, being the then President of Grama Panchayath, Kellor, action is to be initiated against her under the provisions of Karnataka Panchayath Raj Act for her disqualification and also for recovery of the misappropriated amount of Rs.5,000/- as per the orders of Ombudsmen dated 19.02.2014.

10) The respondent no.3 is reported to be dead. Hence, no action is proposed against him.

ಈ ಹಿನ್ನೆಲೆಯಲ್ಲಿ ಶ್ರೀ ರಾಜಶೇಖರ್ ತಂದೆ ಬಸವಣ್ಣೆಪ್ಪ ನೆಲೋಗಿ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಕೆಲ್ಲೂರ ಗ್ರಾಮ ಪಂಚಾಯತಿ, ಜೇವರ್ಗಿ ತಾಲ್ಲೂಕು, ಕಲಬುರಗಿ ಜಿಲ್ಲೆ, ಇವರು ಕರ್ತವ್ಯ ಪಾಲನೆಯಲ್ಲಿ ಸಂಪೂರ್ಣ ಪ್ರಮಾಣಿಕತೆ ಹಾಗೂ ನಿಷ್ಠೆ ತೋರದೆ ಮತ್ತು ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಉಕ್ತವಾದ ದುರ್ನಡತೆ ಎಸಗಿರುವುದರಿಂದ ಶ್ರೀ ರಾಜಶೇಖರ್ ತಂದೆ ಬಸವಣ್ಣೆಪ್ಪ ನೆಲೋಗಿ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 14–ಎ ಅಡಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಲು ಶಿಫಾರಸ್ಸು ಮಾಡಿರುತ್ತಾರೆ.

ಸರ್ಕಾರವು ಮಾನ್ಯ ಉಪಲೋಕಾಯುಕ್ತರ ವರದಿಯನ್ನು ಪರಿಶೀಲಿಸಿ ಈ ಪ್ರಕರಣದಲ್ಲಿ ಒಳಗೊಂಡಿರುವ ನೌಕರರ ವಿರುದ್ಧ ವಿಚಾರಣೆ ನಡೆಸುವುದು ಸೂಕ್ತವೆಂದು ಭಾವಿಸಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14–ಎ ರನ್ವಯ ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವ ಸಲುವಾಗಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/391/ಗ್ರಾಪಂಕಾ/2017 ಬೆಂಗಳೂರು, ದಿನಾಂಕ-18-05-2017.**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ರಾಜಶೇಖರ್ ತಂದೆ ಬಸವಣ್ಣೆಪ್ಪ ನೆಲೋಗಿ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಕೆಲ್ಲೂರ ಗ್ರಾಮ ಪಂಚಾಯತಿ, ಜೇವರ್ಗಿ ತಾಲ್ಲೂಕು, ಕಲಬುರಗಿ ಜಿಲ್ಲೆ, ಇವರುಗಳ ವಿರುದ್ಧ ಇಲಾಖಾ ವಿಚಾರಣಾ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 11ರ ಅನುಸಾರ ಇಲಾಖಾ ವಿಚಾರಣೆ ನಡೆಸಲು ಸದರಿ ನಿಯಮಾವಳಿಗಳ ನಿಯಮ 14-ಎ ಅಡಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಿದೆ.

ಈ ಪ್ರಕರಣದಲ್ಲಿ ಸರ್ಕಾರವು ಶಿಸ್ತು ಪ್ರಾಧಿಕಾರವಾಗಿದ್ದು, ಆಪಾದಿತರಿಗೆ, ನಿಯಮಾನುಸಾರ ಸೂಕ್ತ ದಂಡನೆ ವಿಧಿಸಲು ಸಕ್ಷಮ ಪ್ರಾಧಿಕಾರವಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಟಿ.ವಿ. ಅರುಣ್‌ಕುಮಾರ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಗೆ,

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು. (ಮೂಲದಾಖಲೆಗಳನ್ನು ಇದರೊಂದಿಗೆ ಹಿಂದಿರುಗಿಸಿದೆ) (ಪುಟ ಸಂಖ್ಯೆ:1 ರಿಂದ 325 ರವರೆಗೆ).
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಕಲಬುರಗಿ ಜಿಲ್ಲೆ.
5. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಜೇವರ್ಗಿ ತಾಲ್ಲೂಕು, ಕಲಬುರಗಿ ಜಿಲ್ಲೆ.
6. ಶ್ರೀ ರಾಜಶೇಖರ್ ತಂದೆ ಬಸವಣ್ಣೆಪ್ಪ ನೆಲೋಗಿ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಕೆಲ್ಲೂರ ಗ್ರಾಮ ಪಂಚಾಯತಿ, ಜೇವರ್ಗಿ ತಾಲ್ಲೂಕು, ಕಲಬುರಗಿ ಜಿಲ್ಲೆ.
7. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.